[MR. SPEAKER in the Chair]

Member's Representation

†Sri S. SIVAPPA (Sravanabelagola).—Sir, before going to the next item on the agenda, I would like to draw the attention of the House to a statement made by the Prime Minister while opening the channels at Nagarjuna Sagar. The Prime Minister has made a very important statement and has revealed that while inaugurating the Tungabhadra Channel, she had a talk with the Chief Ministers of Mysore and Andhra and that these two Chief Ministers, like brothers, had agreed to settle the issue among themselves and the third brother the Maharastra Chief Minister with whom they wanted to have a talk in Delhi. So, she has invited them to Delhi. By this, we can understand that the Chief Minister of Mysore and Andhra Chief Minister have come to an agreement and our Chief Minister has not diveulged anything to this House as to what the talk he had to have a settlement by negotiation. Without divulging this information to this House, he is going to Delhi. In this context we can understand that our Chief Minister is in a mood to have a settlement with the Andhra Chief Minister. He is going to Delhi tomorrow to meet the Maharastra Chief Minister also. All these put together go to show that our Chief Minister has already made up his mind to have some sort of settlement, probably, he has given his mind to the Andhra Chief Minister.

In the same function the Andhra Chief Minister has said that he is going to complete the Nagarjuna Sagar within three years. That means, he does not speak about the first stage or second stage which means the installation of the crest gates and everything is included in the first stage. That is what he means and he feels that this is a national project and this must be viewed on a national object. All this goes to show that the Andhra Chief Minister has made out already a case that Mysore should agree for the completion of Nagarjuna Sagar for which our Chief Minister has partially agreed when they met at Tungabhadra channel opening ceremony. So, before the Chief Minister goes to Delhi, he must divulge what talks he had with the Andhra Chief Minister and he must have a mandate from this House in this matter. I want you to direct the Chief Minister to make a statement on the floor of this House as to what talks he had with the Andhra Chief Minister and what were the talks about the settlement and negotiations and he must take this House into confidence and inform the House all about it before he goes to Delhi.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಕೃಷ್ಣಾ ಮತ್ತು ಗೋದಾವರಿ ನೀರಿನ ಹಂಚಿಕೆಯ ವಿಷಯದಲ್ಲಿ ಈಗ ಪ್ರಧಾನ ಮಂತ್ರಿಗಳು ದೆಹಲಿಯಲ್ಲಿ ಮುಖ್ಯ ಮಂತ್ರಿಗಳ ಸಮ್ಮೇಳನವನ್ನು ಕರೆದಿದ್ದಾರೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಈ ತಿಂಗಳು 17—18ನೇ ತಾರೀಖು ಈ ಸಮ್ಮೇಳನದಲ್ಲಿ ಕೃಷ್ಣಾ ಮತ್ತು ಗೋದಾವರಿ ನೀರಿನ ಹಂಚಿಕೆಯ ವಿಷಯದಲ್ಲಿ ಚರ್ಚೆ ಮಾಡಿ ಏನಾದರೂ ಒಂದು ತೀರ್ಮಾನಕ್ಕೆ ಬರುತ್ತಾರೆ ಎಂದು ಹೇಳಿದರು. ಜೊತೆಗೆ ಶ್ರೀಮಾನ್ ಕೆ. ಎಲ್. ರಾವ್ ಅವರ ಸಂಧಾನ ಒಳ್ಳೆಯದು ಎಂದು ಹೇಳಿ

ದ್ದಾರೆ. ಕೃಷ್ಣಾ ನೀರಿನ ಬಗ್ಗೆ ಪ್ರಧಾನಿಗಳು ಆಂಧ್ರದಲ್ಲಿ ಮಾಡಿರುವ ಭಾಷಣವನ್ನು ನೋಡಿದರೆ, ಶ್ರೀಮಾನ್ ಚನ್ನಬಸಪ್ಪನವರು ಈ ಮಾನ್ಯ ಸಭೆಯಲ್ಲಿ ಏನು ಹೇಳಿದ್ದಾರೆಯೋ ಅದಕ್ಕಿಂತಲೂ ಕಳವಳಕಾರಿಯಾದ, ಒಂದು ಭಯಾನಕವಾದ ಭವಿಷ್ಯ ಇದೆಯೆಂದು ನಮಗೆ ಕಂಡು ಬರುತ್ತದೆ. ತಾವು ಹೇಗೂ ದೆಹಲಿಗೆ ಹೋಗುತ್ತಿದ್ದೀರಿ, ಅದಕ್ಕೋಸ್ಕರ ನನ್ನ ನಮ್ರವಾದ ಸಲಹೆ ಇಷ್ಟೆ. ಮಾನ್ಯ ಶಿವಪ್ಪನವರು ಹೇಳಿದ ಹಾಗೆ ಕಾರಣಾಂತರದಿಂದ ಈ ಸಭೆಯಲ್ಲಿ ಕೃಷ್ಣಾ ಗೋದಾವರಿ ನೀರಿನ ಹಂಚಿಕೆಗೆ ಸಂಬಂಧಪಟ್ಟ ನಿರ್ಣಯವನ್ನು ಚರ್ಚೆ ಮಾಡಿ ನಿರ್ಣಯ ಮಾಡಲಿಕ್ಕೆ ಆಗಲಿಲ್ಲ. ಇದಕ್ಕೆ ಬೇರೆ ಕಾರಣಗಳು ಇರಬಹುದು. ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಯಾವ ಮಾತುಕತೆಗಳನ್ನೂ ಆಡಲಿಲ್ಲ ಎಂದು ಶ್ರೀಮಾನ್ ಶಿವಪ್ಪನವರು ಹೇಳಿದರು. ಮೊನ್ನೆ ಶ್ರೀಮಾನ್ ಚನ್ನಬಸಪ್ಪನವರು ಬಹಳ ಚೆನ್ನಾಗಿ ಕೇಳಿದರು ; ಈ ಕೃಷ್ಣಾ ನೀರಿನ ವಿಷಯದಲ್ಲಿ ನಮ್ಮ ಸರ್ಕಾರದವರು ಏನು ನಿಲುವನ್ನು ತೆಗೆದುಕೊಂಡಿದ್ದೀರಿ, ಅದನ್ನು ತಿಳಿಸುವುದಕ್ಕೆ ಸಾಧ್ಯವಿದೆಯೇ ಎಂದು ಅವರು ಕೇಳಿದರು. ಅದಕ್ಕೆ ನಮ್ಮ ದುರದೃಷ್ಟವಶಾತ್ ಲೋಕೋಪಯೋಗಿ ಶಾಖೆಯ ಮಂತ್ರಿಗಳು ರಾಜಕೀಯ ಉತ್ತರವನ್ನು ಕೊಟ್ಟಿದ್ದಾರೆ. ಅವರು ಚನ್ನಬಸಪ್ಪನವರನ್ನು ವೈಯಕ್ತಿಕ ರೀತಿಯಲ್ಲಿ ಹಾಗೆ ಹೀಗೆ ಎನ್ನುವ ಮಾತನ್ನು ಹೇಳಿ ಮುಗಿಸಿದರು. ಇದರಿಂದ ಏನಾಗಿದೆ ಎಂದರೆ ಈ ವಿಷಯದಲ್ಲಿ ಈ ಸದನದಲ್ಲಿ ಒಂದು ತತ್ವದ ಬಗ್ಗೆ ಒಮ್ಮತ ಅಭಿಪ್ರಾಯಕ್ಕೆ ಬರುವುದಕ್ಕೆ ಸಾಧ್ಯವಾಗಿಲ್ಲ ಎಂಬುದು ಕಂಡು ಬರುತ್ತದೆ. ಇದರಲ್ಲಿ ಒಂದು ಐಕಮತ್ಯ ಇಲ್ಲದ ಒಂದು ರೀತಿ ಹೊರಗಡೆಯವರಿಗೆ ಕಂಡು ಬರುತ್ತದೆ. ಅದಕ್ಕಾಗಿ ಈಗ ನಾನು ಒಂದು ಸಲಹೆ ಮಾಡುತ್ತೇನೆ. ತಾವು ಹೇಗೂ ದೆಹಲಿಗೆ ಹೋಗುತ್ತೀರಿ, ತಮ್ಮ ಮುಖಂಡತ್ವದಲ್ಲಿ ಶ್ರೀಮಾನ್ ಚನ್ನಬಸಪ್ಪನವರು, ಶ್ರೀಮಾನ್ ಶಿವಪ್ಪನವರು, ಶ್ರೀಮಾನ್ ನಂಜೇ ಗೌಡರು ಇತ್ಯಾದಿ ಯಾರು ಯಾರು ಈ ವಿಷಯದಲ್ಲಿ ಮಾಹಿತಿಯನ್ನು ಹೊಂದಿದ್ದಾರೆಯೋ ಅವರೆಲ್ಲರನ್ನೂ ಒಳಗೊಂಡಂತಹ ಒಂದು ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗಿ ಅಲ್ಲಿ ಈ ಕೃಷ್ಣಾ ನೀರಿನ ವಿವಾದದ ಸಂಬಂಧದಲ್ಲಿ ಪ್ರಧಾನಿಗಳು, ಆಂಧ್ರ ಮುಖ್ಯ ಮಂತ್ರಿಗಳು ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೊಡನೆ ಮಾತುಕತೆ ನಡೆಸಬೇಕು. ಇಲ್ಲದೇ ಹೋದರೆ ಶ್ರೀಮಾನ್ ಚನ್ನಬಸಪ್ಪನವರ ಮುಖಂಡತ್ವದಲ್ಲಿ ನಾನು ಈಗಾಗಲೇ ಹೇಳಿದ ಮಾನ್ಯ ಸದಸ್ಯರನ್ನೊಳಗೊಂಡ ಒಂದು ನಿಯೋಗವನ್ನು ದೆಹಲಿಗೆ ಕಳುಹಿಸಬೇಕೆಂದು ನಾನು ಹೇಳುತ್ತೇನೆ. ಈಗ ಈ ಸಭೆ ಮುಕ್ತಾಯವಾಗುತ್ತಿದೆ. ಇನ್ನು ಮತ್ತೆ ಈ ಸಭೆ ಸೇರಬೇಕಾದರೆ ಆರು ತಿಂಗಳಾಗುತ್ತದೆಯೋ ಅಥವಾ ಯಾವಾಗ ಸೇರುತ್ತಾರೆಯೋ ಗೊತ್ತಿಲ್ಲ. ಒಂದು ವೇಳೆ ಮಾನ್ಯ ಶಿವಪ್ಪನವರು ವಿರೋಧ ಪಕ್ಷದವರು, ಅವರು ಹೇಳಿಕೆ ಕೊಡುವುದು ಹೇಗೆ ಎಂಬ ಅಭಿಪ್ರಾಯವಿದ್ದ ಹಾಗೆ ಆಗುವುದು ಸರ್ವಸಮ್ಮತ ಇಲ್ಲದಿದ್ದರೆ ಇನ್ನು ಆರು ತಿಂಗಳ ನಂತರದಲ್ಲಿ ನಾವು ಸೇರಿ ಈ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಹೋದರೆ ಗತಜಲಸೇತುಬಂಧನವಾದಹಾಗಾಗುತ್ತದೆ, ಆ ಚರ್ಚೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಈ ವಿಷಯದಲ್ಲಿ ಮುಖ್ಯ ಮಂತ್ರಿಗಳ ಜೊತೆಯಲ್ಲಿ ತಾವು ಸಮಾಲೋಚನೆ ಮಾಡಿ ಒಂದು ನಿಯೋಗವನ್ನು ನಮ್ಮ ರಾಜ್ಯದ ಪರವಾಗಿ ದೆಹಲಿಗೆ ಕಳುಹಿಸಿ ಅಲ್ಲಿ ಪ್ರಧಾನಿಗಳು, ಆಂಧ್ರದ ಮುಖ್ಯ ಮಂತ್ರಿಗಳು, ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತುಕತೆಯನ್ನು ನಡೆಸುವಂತೆ ಮಾಡಬೇಕು. ಈ ವಿಷಯದಲ್ಲಿ ನಿರ್ಣಯವಿಲ್ಲದಿದ್ದರೂ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಆಳುವ ಪಕ್ಷದವರು ಮತ್ತು ವಿರೋಧ ಪಕ್ಷದ ಅನೇಕ ಸದಸ್ಯರು ಹೇಳಿದ್ದಾರೆ. ಈಗ ಪ್ರಧಾನ ಮಂತ್ರಿಗಳು ಸಮ್ಮೇಳನವನ್ನು ಕರೆದಿರುವಾಗ ಮುಖ್ಯ ಮಂತ್ರಿಗಳ ಮುಖಂಡತ್ವದಲ್ಲಿ ಅಲ್ಲಿಗೆ ಸಾಕಷ್ಟು ವಿಷಯಗಳನ್ನು ತಿಳಿದಿರುವವರು ಹೋಗಿ ಮಾತುಕತೆ ನಡೆಸುವುದು ಒಳ್ಳೆಯದು. ಅವರ ಮುಂದೆ ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾದ ರೀತಿಯಲ್ಲಿ ನ್ಯಾಯವಾದ ರೀತಿಯಲ್ಲಿ ಇಡಬೇಕು. ಒಂದು ವೇಳೆ ನಮಗೆ ನ್ಯಾಯವಾದ ಪಾಲು ನೀರು ದೊರೆಯುವುದಿಲ್ಲ ಎಂದು ಕಂಡುಬಂದಾಗ ತಕ್ಷಣ ಕೇಂದ್ರ ಸರ್ಕಾರಕ್ಕೆ ಒತ್ತಾಯ ಪಡಿಸಿ ಈ ವಿವಾದವನ್ನು ಒಂದು ನ್ಯಾಯಾಲಯದ ತೀರ್ಪಿಗೆ ಒಳಪಡಿಸಿ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಲೋಕೋಪಯೋಗಿ ಶಾಖೆಯ ಮಂತ್ರಿಗಳೂ ಒಪ್ಪಬಹುದು. ಆದ್ದರಿಂದ ಈ ಕೃಷ್ಣಾ ನದಿಯ ನೀರಿನ ಹಂಚಿಕೆಗೆ ಸಂಬಂಧಪಟ್ಟಂತೆ ನಮ್ಮ ಸರ್ಕಾರದ ವರದಿಗಳು ಏನಿವೆಯೋ ಅವುಗಳನ್ನೆಲ್ಲಾ ನಮ್ಮ ನಿಯೋಗದವರ ಕೈಯ್ಯಲ್ಲಿ ಕೊಟ್ಟು ಅವರನ್ನು ದೆಹಲಿಗೆ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಈಗ ಮಂತ್ರಿಗಳು ಮಾತ್ರ ಹೋದರೆ ಸಾಕು. ಡೆಲಿಗೇಷನ್ ಹೋಗಬೇಕಾದ ಅವಶ್ಯಕತೆ ಇವೆಯೇ? ಅದನ್ನು ಯೋಚನೆ ಮಾಡಬೇಕಾಗುತ್ತದೆ. ಕಾವೇರಿ ಅಗ್ರಿಮೆಂಟ್ ನಾನು ಓದಿದ್ದೇನೆ. ಅರ್ಬಿಟ್ರೇಶನ್‌ನಿಂದ ರಾಜ್ಯಕ್ಕೆ ಧಕ್ಕೆಯಾಗುತ್ತದೆ. ಅರ್ಬಿಟ್ರೇಷನ್ ಅವಾರ್ಡ್ ಆಗಿ ಬಿಟ್ಟರೆ, ಅದನ್ನು ಮುಂದೆ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ.

(ಶ್ರೀ ಎಚ್. ಡಿ. ದೇವೇಗೌಡ)

ಅದರಿಂದ ಅನುಕೂಲ ಆಗದೆ ಹೋದರೆ, ಅನಾಹುತವಾಗುತ್ತಹೆ. ಮೊದಲು ನೆಗೋಸಿಯೇಷನ್ ಮಾಡಬೇಕು. ಇದರಲ್ಲಿ ಅನ ಕೂಲ ಆಗದೆ ಹೋದರೆ, ಕೊನೆಯದಾಗಿ ಅದನ್ನು ತೆಗೆದುಕೊಳ್ಳ ಬಹುದು.

11-00 A.M.

† Sri AZEEZ SAIT (Narasimharaja).—Our leader has spoken and so I will not speak anything about that. My representation to you is that some days back, in this august House, you had made known of a privilege Motion against the hon'ble Member Sri Gopal Gowda sent by another hon'ble Member Sri Basavannappa ; and you were pleased to say that this privilege motion would be taken after the demands are over. Since we meet for the last day in this Session, I do not know whether that Privilege Motion is still there and is coming for discussion before this House ; whether it will be withdrawn from this House by the hon'ble Member Mr. Basavannappa and buried. Mr. Bavasannappa can make a statement now whether he is pressing it or not because it has gone into the official records. There is lot of confusion arising out of it in the mind of the public ; they may attribute some failures on the part of the Samyukta Socialist Party, *i.e.*, S.S.P. ; they may be misled that some grave situation has developed against Sri Gopal Gowda as a result of the Privilege Motion moved in this august House. Moreover, the matter has not been disclosed. There is lot of confusion about it and that confusion has to be cleared by the hon'ble Member Sri Basavannappa himself by declaring whether he withdraws the motion or presses for it. If he wahts to withdraw, I do not think there is any difficulty. If he is keen on pressing it, let him do it now because certain fundamentals are involved in it. I want a direction from the Chair because not only this House but the entire country has come to know of it, and naturally the country outside must know whether it is shelved or how it is disposed of.

Mr. SPEAKER.—This hon'ble Member Sri Azeez Sait has, not under any rule, without asking for permission, taken up a matter. He refers to what I stated on a prior occasion. I do not know whether he has discussed it with his Leader, Party or the United Front or the Whip. It is not that I am unaware of it. It is in the interest of all that I have delayed in taking it. He should not raise it here. If he wants, he can come and meet me. Any way, if he wants to raise it, he must do it after giving notice in a proper manner if he thinks that the Privilege Motion or the delay in that is caussing any trouble. I do not know what prevented the Member from giving notice instead of speaking with all that vehemence. Merely because, an idea crosses his mind, he disturbs the other work. I would appeal to this Member—let it be on record, that he will kindly at least now and hereafter, give me better co-operation and not disturb the work of the House.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದಲ್ಲಿರತಕ್ಕಂತಹ ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ಸೀಟುಗಳ ಹಂಚಿಕೆಯ ವಿಷಯದಲ್ಲಿ ಒಂದು ಮುಖ್ಯವಾದ ವಿಷಯವನ್ನು ಈ ಸಭೆಯ ಗಮನಕ್ಕೆ ತರಲು ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

Mr. SPEAKER.—I have sent word to the Hon'ble Minister. Without the Minister what can be done? It will simply go to the records. Before we rise, if it is possible it can be raised. Otherwise, I cannot do anything. Can I arrest the Minister and bring him here? It is not on the Agenda. If possible we will try.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಯಾವಾಗ ಅವಕಾಶ ಮಾಡಿ ಕೊಡುತ್ತೀರಿ ಸ್ವಾಮಿ?

Mr. SPEAKER.—Is it not better that he is present?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಅವಕಾಶ ಕೊಟ್ಟರೆ ಆಗಬಹುದು.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಮೂರು ದಿವಸಗಳ ಹಿಂದೆ ಮಾನ್ಯ ಹುಚ್ಚಮಾಸ್ತಿ ಗೌಡರು ಒಂದು ಕ್ರಿಯಾರೋಪವನ್ನು ಎತ್ತಿದರು. ಅದೇನೆಂದರೆ—ಯಾರಾದರೂ ಸದಸ್ಯರು ಮಾತನಾಡುವಾಗ, ಪತ್ರಿಕೆಯವರಿಗೆ ಬರೆದುಕೊಳ್ಳಬೇಡಿ, ರಿಕಾರ್ಡು ಮಾಡಬೇಡಿ ಎಂದು ತಾವು ಹೇಳಿದುದರ ಬಗ್ಗೆ ರೂಲಿಂಗ್ ಕೊಡಬೇಕೆಂದು. ಈಗ ಪ್ರೆಸ್ಸಿನವರಿಗೆ ಬರೆಯ ಬೇಡಿ ಎಂದು ಹೇಳಿದ್ದೀರಿ. ಆದರೆ ಮೇಲೆ ವಿಸಿಟರ್ಸ್ ಇದ್ದಾರಲ್ಲ ಅವರು ಹೊರಗಡೆ ಎಲ್ಲಾ ಹೋಗಿ ಹೇಳುತ್ತಾರೆ, ಅದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಹುಚ್ಚಮಾಸ್ತಿಗೌಡರು ಎತ್ತಿದಂತಹ ಪ್ರಶ್ನೆಗೆ ತಾವು ರೂಲಿಂಗ್ ಕೊಟ್ಟಿಲ್ಲ. ಆದರೆ ನಾನು ಒಂದು ಮಾತು ಹೇಳುತ್ತೇನೆ. ನನಗೆ ಗೊತ್ತಿದ್ದ ಮಟ್ಟಿಗೆ ಪ್ರೆಸ್ಸಿನವರು ಪ್ರಕಟಿಸಬಾರದು ಎಂದರೆ, ಅವರು ಡಾಟ್ ಹಾಕುತ್ತಾರೆ. ಅಧಿಕೃತ ವರದಿಯಲ್ಲಿ ತಾವು ಬೇಕಾದರೆ ನಂತರ ಎಕ್ಸ್‌ಪಂಜ್‌ಮಾಡಿ ಇಲ್ಲವಿದ್ದರೆ ಇನ್‌ಕ್ಯಾಮರಾ ವೋಟಿಂಗ್ ಆಗಬೇಕು. ನಾವು ಹೊರಗಡೆ ಹೋಗುತ್ತೇವೆ. ಘರ್ಷಣೆ, ಚಕಮಕಿ ಆಗುತ್ತಿರುವುದು ಪ್ರೊಸೀಡಿಂಗ್ಸ್‌ನಲ್ಲಿ ಬರಬೇಕು, ಪ್ರೆಸ್ಸಿನಲ್ಲಿ ಬರಬೇಕು. ಅವರಿಗೆ ಅದನ್ನು ಮಾಡುವುದಕ್ಕೆ ಅಧಿಕಾರವಿದೆ. ಅವರನ್ನು ಬಲತ್ಕಾರ ಮಾಡುವುದಕ್ಕಾಗುವುದಿಲ್ಲ. ತಮಗೆ ಹೇಗೆ ಮಾಡಬೇಕೆಂದು ಹೇಳಲೂ ಅಧಿಕಾರವಿಲ್ಲ. ಅವರಿಗೂ ಇದರಿಂದ ಸ್ವಲ್ಪ ಕಷ್ಟವಾಗುತ್ತಿರುವುದನ್ನು ಹೇಳುತ್ತಿದ್ದಾರೆ. ಆದ್ದರಿಂದ ತಾವು ಸ್ವಲ್ಪ ಇದರ ಮೇಲೆ ಸ್ಪಷ್ಟೀಕರಣ ಮಾಡಿಬಿಟ್ಟರೆ ಒಳ್ಳೆಯದು.

ಅಧ್ಯಕ್ಷರು.—ನಿಮ್ಮ ಹತ್ತಿರ ಹೇಳುವುದನ್ನು ನಮ್ಮ ಹತ್ತಿರ ಹೇಳಬಹುದಲ್ಲ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಅನೋಗ್ಯವೂ ಚೆನ್ನಾಗಿ ಇರಲಿ ಎಂದು ನಮ್ಮ ಅಭಿಲಾಷೆ.

ಅಧ್ಯಕ್ಷರು.—ನೀವು ಎದ್ದು ನಿಂತಕೂಡಲೇ ಮಾತಾಡುತ್ತೀರಿ. ನಿಮಗೆ ಮಾತಾಡಲು ನಾನು ಅನುಮತಿ ಕೊಡಬೇಕು. ಅದಕ್ಕೆ ಮೊದಲೇ ನೀವು ಎದ್ದುನಿಂತು ಮಾತಾಡಿದ್ದೀರಿ. ಆ ರೀತಿ ಮಾಡಬಾರದು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ದಿವಸ ಈ ವಿಷಯದ ಮೇಲೆ ತಾವು ಅರ್ಥಮಾಡಿ ಕೊಂಡಿದ್ದೀರಿ, ಅದರ ಮೇಲೆ ತಮ್ಮ ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಬಾಯಿಂದ ಬಂದರೆ ಬಹಳ ಒಳ್ಳೆಯದು. ಶಂಖದಿಂದ ಬಂದರೇನೇ ಅದು ತೀರ್ಥವಾಗುತ್ತದೆ.

ಅಧ್ಯಕ್ಷರು.—ನನ್ನ ಬಾಯಿಗೆ "ಶಂಖ" ಎಂಬ ಶಬ್ದ ಉಪಯೋಗಿಸಿದ್ದಕ್ಕೆ ನಾನು ಆಕ್ಷೇಪಣೆಯನ್ನು ಎತ್ತುತ್ತೇನೆ.

(*Laughter*).